ವಿಶ್ವಾಸವನ್ನು ಉಳಿಸಿಕೊಳ್ಳುವಂತಹ ಪ್ರಯತ್ನವನ್ನು ನಾನು ಕಡೆಯ ನಿಮಿಷದವರೆಗೂ ಮಾಡುತ್ತೇನೆ. ಈಗಾಗಲೇ ನಾನು ಪ್ರಸ್ತಾಪ ಮಾಡಿದಂತೆ ನನ್ನ ನೆನಪಿನ ಮುಂದೆ ಬರತಕ್ಕಂಥದ್ದು ನಮ್ಮನ್ನು ಅಗಲಿ ಹೋಗಿರತಕ್ಕಂಥ ಮಾನ್ಯ ದೇವರಾಜ ಅರಸುರವರು ಮತ್ತು ನನ್ನ ಆತ್ಮೀಯ ಸ್ನೇಹಿತ ದಿವಂಗತ ಅಬ್ದುಲ್ ನಜೀರ್ ಸಾಬ್‌ರವರು. ನಾನು ಯಾವ ಸ್ಥಾನವನ್ನು ಕೇಳಲಿಲ್ಲವೆಂದು ಶ್ರೀ ಬೈರೇಗೌಡರು ಹೇಳಿದರು.

ನಾನಾಗಲಿ, ನನ್ನ ಆತ್ಮೀಯ ಮಿತ್ರರಾಗಲಿ ಎಂದೂ ಯಾವುದನ್ನು ಕೇಳಿ ಪಡೆದುಕೊಂಡವರಲ್ಲ. ಬಂದದ್ದನ್ನು ಬಹಳ ಮುಜುಗರದಿಂದ, ನಾಚಿಕೆಯಿಂದಲೇ ಅದನ್ನು ಸ್ವೀಕಾರ ಮಾಡಿದ್ದೇವೆ. ಶಕ್ತಿ ಮೀರಿ ಪ್ರಾಮಾಣಿಕತೆಯಿಂದ ಈ ಜವಾಬ್ದಾರಿಯನ್ನು ನಿರ್ವಹಿಸುತ್ತೇನೆ. ಇದಕ್ಕೆ ತಮ್ಮೆಲ್ಲರ ಸಹಕಾರ ನನಗೆ ಅಗತ್ಯವಿದೆ. ಇದಕ್ಕೆಲ್ಲದಕ್ಕಿಂತ ಮುಖ್ಯವಾಗಿ ನನ್ನ ಪತ್ರಕರ್ತ ಸ್ನೇಹಿತರು ಯಾರಿದ್ದಾರೆ ಅವರಲ್ಲಿ ಒಂದು ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಸದನದ ಕಲಾಪಗಳನ್ನು ಪ್ರಚಾರ ಮಾಡುವಂತಹ ಸಂದರ್ಭದಲ್ಲಿ ವ್ಯಾಸಂಗ ಮಾಡಿ ಶ್ರಮ ಪಟ್ಟು ಬಂದು ಜನಗಳಿಗೆ ಪ್ರಯೋಜನವಾಗುವಂತಹ ವಿಷಯವನ್ನು ಪ್ರಸ್ತಾಪ ಮಾಡುವಂತಹ ವಿಷಯಗಳಿಗೆ ಪ್ರಾಧಾನ್ಯತೆ ಸಿಕ್ಕುವಂತಹ ಒಂದು ವ್ಯವಸ್ಥೆ ಬರಲಿ. ಈ ಸದನ ಸಮಾಜದ ಪ್ರತಿಬಿಂಬ. ಎಲ್ಲಾ ರಂಗಗಳಲ್ಲಿ ಯಾವ ರೀತಿ ನಾವು ಡಿ – ಜನರೇಷನ್ ಅನ್ನು ನೋಡುತ್ತಿದ್ದೇವೋ – ಇದಕ್ಕೆ ತಾವೇನು ಹೊರತಲ್ಲ ಏಕೆಂದರೆ ನೀವು ಕೂಡ ಈ ಸಮಾಜದ ಒಂದು ಅಂಗ. ಹಾಗೆ ಹೆಚ್ಚು ಪ್ರೋತ್ಸಾಹ ಒಳ್ಳೆಯ ಜನರಿಗೆ ಸಿಕ್ಕುವುದರಿಂದ ಇನ್ನೂ ಹೆಚ್ಚು ಜನ ಉತ್ಸಾಹಿ ತರುಣರು ಎಲ್ಲರೂ ಕೂಡ ಕಲಾಪಗಳಲ್ಲಿ ಭಾಗವಹಿಸುವುದಕ್ಕೆ ತಾವು ಕೂಡ ಪರೋಕ್ಷವಾಗಿ ಪ್ರೋತ್ಸಾಹ ಕೊಟ್ಟಂತಾಗುತ್ತದೆ, ಎಂಬ ಸೂಚನೆಯನ್ನು ಕೊಟ್ಟು ತಮಗೆಲ್ಲರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಪ್ರಕಟಣೆ

ಅಧ್ಯಕ್ಷರು:– ಹತ್ತನೇ ವಿಧಾನಸಭೆಯ ಚುನಾವಣೆ ನಡೆದು ಅತಿ ಹೆಚ್ಚಿನ ಸ್ಥಾನ ಪಡೆದಿರುವ ಜನತಾ ದಳ ಸರ್ಕಾರವನ್ನು ರಚಿಸಿರುತ್ತದೆ. ಜನತಾ ದಳದ ನಂತರ ಭಾರತೀಯ ಜನತಾ ಪಕ್ಷ 40 ಸ್ಥಾನಗಳನ್ನು ಪಡೆದು ಎರಡನೇ ಸ್ಥಾನದಲ್ಲಿದೆ. ಭಾರತೀಯ ಜನತಾ ಪಕ್ಷದ ಪ್ರದೇಶ ಅಧ್ಯಕ್ಷರಾದ ಶ್ರೀ. ಕೆ.ಎಸ್. ಈಶ್ವರಪ್ಪನವರು ತಾರೀಖು 11.12.94ರ ಪತ್ರವನ್ನು ವಿಧಾನಸಭಾಧ್ಯಕ್ಷರಿಗೆ ಬರೆಯುವ ಮೂಲಕ ವಿಧಾನಸಭೆಯಲ್ಲಿ ಭಾರತೀಯ ಜನತಾ ಪಕ್ಷ ಹೆಚ್ಚಿನ ಸದಸ್ಯರುಗಳುಳ್ಳ ಎರಡನೇ ದೊಡ್ಡ ಪಕ್ಷವಾಗಿದ್ದು ಹಾಗೂ ಭಾರತೀಯ ಜನತಾ ಪಕ್ಷದ ಸದಸ್ಯರು ಹಾಗೂ ವಿಧಾನಸಭಾ ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರನ್ನು ಆ ಪಕ್ಷದ ನಾಯಕರನ್ನಾಗಿ ಚುನಾಯಿಸಿದ್ದು, ಶ್ರೀ ಬಿ.ಎಸ್. ಯಡಿಯೂರಪ್ಪನವರನ್ನು ವಿರೋಧ ಪಕ್ಷದ ನಾಯಕರನ್ನಾಗಿ ಪರಿಗಣಿಸಬೇಕಾಗಿ ಕೋರಿರುತ್ತಾರೆ. ವಿಧಾನಸಭೆಯ ಕಾರ್ಯ ವಿಧಾನ ಹಾಗೂ ನಡವಳಿಕೆಯ ಅರ್ಥ ವಿವರಣೆ ನಿಯಮ 2 (2) ರಲ್ಲಿ 'ವಿರೋಧ ಪಕ್ಷದ ನಾಯಕರು' ಎಂದರೆ ಸರ್ಕಾರವನ್ನು ರಚಿಸಿರುವ ಪಕ್ಷವಲ್ಲದ ಹೆಚ್ಚಿನ ಸಂಖ್ಯೆಯ ಸದಸ್ಯರನ್ನು ಹೊಂದಿರುವ ಮತ್ತು ನಿರ್ದಿಷ್ಟಪಡಿಸಲಾದ ಸಂಖ್ಯಾಬಲ ಕ್ರಮ ಹೊಂದಿರುವ ಹಾಗೂ ವಿಧಾನ ಸಭಾಧ್ಯಕ್ಷರಿಂದ 'ವಿರೋಧ ಪಕ್ಷದ ನಾಯಕ'ರೆಂದು ಮಾನ್ಯತೆ ಪಡೆದ ವಿರೋಧ ಪಕ್ಷದ ನಾಯಕರೆಂದು ಹೇಳಲಾಗಿದೆ. ಈಗ ಜನತಾ ದಳ ಪಕ್ಷ ಸರ್ಕಾರ ರಚಿಸಿದ್ದು ಭಾರತೀಯ ಜನತಾ ಪಕ್ಷವು 40 ಸದಸ್ಯರನ್ನು ಹೊಂದಿದ್ದು ಎರಡನೇ ಸ್ಥಾನದಲ್ಲಿರುವ ಕಾರಣ ಹಾಗೂ ವಿಧಾನಮಂಡಲದ ಕಾರ್ಯ ವಿಧಾನ ಹಾಗೂ ನಡವಳಿಕೆಯ ಅರ್ಥ ವಿವರಣೆ ನಿಯಮ 2(2)ರಲ್ಲಿ ಹೇಳಿರುವ ರೀತ್ಯ

ಎಲ್ಲಾ ಅಂಶಗಳನ್ನು ಪರಿಗಣಿಸಲ್ಪಟ್ಟು ಶ್ರೀ ಬಿ.ಎಸ್. ಯಡಿಯೂರಪ್ಪನವರನ್ನು ವಿರೋಧ ಪಕ್ಷದ ನಾಯಕರನ್ನಾಗಿ ಇಂದಿನಿಂದ ಜಾರಿಗೆ ಬರುವಂತೆ ಮನ್ನಣೆ ನೀಡುತ್ತಿದ್ದೇನೆ.

ಈಗ ಸಭೆಯನ್ನು ಮುಂದೂಡಲಾಗಿದೆ. ಪುನಃ ನಾಳೆ ಬೆಳಿಗ್ಗೆ 11.00 ಗಂಟೆಗೆ ಸಭೆ ಸೇರುತ್ತದೆ.

(ಸದನವು ಮಧ್ಯಾಹ್ನ 12 ಗಂಟೆ 42 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 28ನೇ ಡಿಸೆಂಬರ್ ಮಾಹೆ 1994ರ ಬುಧವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು.)

---

† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).